
ಗೋಪಾಲಕೃಷ್ಣ ಪೈ



# ಟ್ರಾಫಿಕ್ ಜಾಮ್

ಮಧ್ಯಾಹ್ನ ಕಟ್ಟಿದ ಮೋಡ, ಸಂಜೆಯಾಗುವಾಗ ಸಣ್ಣಕ್ಕೆ ಮಳೆ ಹನಿಸತೊಡಗಿತ್ತು. ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರಿನಲ್ಲಿ ಯಾವಾಗಲೂ ಸಂಜೆಯ ಹೊತ್ತಿಗೇ ಮಳೆ ಸುರಿಯುವುದು. ಅಂದ ಮೇಲೆ ಕೊಚ್ಚೆ, ಕೆಸರು ತುಂಬಿ, ಟ್ರಾಫಿಕ್ ಜಾಮ್ ಆಗಿ ಮನೆಗೆ ಹೋಗುವುದು ತುಂಬ ಕಷ್ಟ. ಅದರ ಮೇಲೆ ಆಫೀಸಿನಲ್ಲಿ ಬಾಸ್ ತುಸು ಬೇಗ ಎದ್ದು ಮನೆಗೆ ಹೊರಟರೆ ಮುಖ ಸಿಂಡರಿಸಿಕೊಳ್ಳುತ್ತಾನೆ. ಹೊರಡುವ ಹೊತ್ತಿಗೆ ಬಂದು, 'ಈ ಒಂದು ಫೈಲ್ ನೋಡಿ ಕೊಡಿ' ಎಂದು ಜನ್ಮಾಂತರದ ವೈರಿಯಂತೆ ಎರಗುತ್ತಾನೆ. ಹೆಣ್ಣುಮಕ್ಕಳು ಎನ್ನುವ ಒಂದಿಷ್ಟು ಸಹಾನುಭೂತಿಯನ್ನೂ ತೋರಿಸದ ಗೃಧ್ರ. ಮನೆಗೆ ಹೋಗುತ್ತಾ, 'ಡೇ ಕೇರ್'ನಲ್ಲಿ ಬಿಟ್ಟ ಮಗಳನ್ನು ಎತ್ತಿಕೊಂಡು ಹೋಗಿ ರಾತ್ರಿಯ ಕೆಲಸವನ್ನೂ ಮಾಡುವ ಕೆಲಸವಿದೆ ಎನ್ನುವುದು